# ದೇವಪ್ಪ–ಅನಸವ್ವ ಕದನ ಕುತೂಹಲ!

## ನಂಬಿಕೆಯ ನೂಲು

■ ಬಸು ಬೇವಿನಗಿಡದ
ಕಲೆ: ಎಚ್.ಎಸ್. ಮೋನಪ್ಪ

**ಅ**ಪ್ಪ ಅವ್ವನ ಮಾತು ಕೇಳಿ ತಾನು ಒಬ್ಬ ಕುರೂಪಿಯನ್ನು ಮದುವೆಯಾದೆ! ಜಗಳದಲ್ಲಿ ಆಕೆ ಒಂದು ಸಲ ಹಂಗಿಸಿದಳು. ಇವನ ಸಿಟ್ಟು ತಾರಕಕ್ಕೇರಿತು. ಉಣ್ಣುತ್ತಿದ್ದ ತಾಟನ್ನು ಅವಳೆಡೆಗೆ ಒಗೆದ. ಪುಣ್ಯಕ್ಕೆ ಅದು ಅವಳಿಗೆ ತಾಗಲಿಲ್ಲ. ಅವತ್ತು ಹೊಟೇಲು ರಣರಂಗವಾಯಿತು. ಬಾಯಿಗೆ ಬಂದ ಶಬ್ದಗಳನ್ನಾಡಿದರು. ದುಃಖ ಮರೆಯಲೋ, ಅಗತ್ಯಕ್ಕಾಗಿಯೋ ಆತ ಅಡುಗೆ ಮಾಡಲು ಊರೂರು ತಿರುಗತೊಡಗಿದ. ಊರೂರಿಗೆ ಬಂದರೆ ಬಂದ. ಇಲ್ಲದಿದ್ದರೆ ಇಲ್ಲ. ಹೊಲಕ್ಕಾಗಿ ಮಾಡಿದ ಸಾಲ ತೀರಿಸಲಿಕ್ಕಾಗದೆ ಚಿಂತಿಸುವನು. ಹೊಟೇಲಿಗೆ ಸಾಮಾನು ತರುವುದನ್ನು ಬೇಕೆಂತಲೇ ಬಿಟ್ಟಿದ್ದ. ಹೆಂಡತಿಗೂ ಬುದ್ಧಿ ಬರಲಿ. ಅನಸವ್ವನಿಗೂ ಉದ್ರಿ ಎಷ್ಟೆಂದು ಕೊಡುತ್ತಾರೆ, ನೋಡೋಣ. ಆದರೆ ಸಾಮಾನು ಬಂದೇ ಬರುತ್ತಿದ್ದವು. ಕಿರಾಣಿ ಸಾಮಾನು ಯಾರು ಉದ್ರಿ ಕೊಡುತ್ತಾರೆ ಎನ್ನುವ ದಿಗಿಲು.

ಒಂದು ದಿನ ತಿಳಿಯಿತು. ದೇವಪ್ಪ ಅವತ್ತು ಊರಿಗೆ ಬಂದ ದಿನ ಕಂಡಕ್ಟರ್ ಸುಭಾಸ ದುರ್ಗಪ್ಪನಿಗೆ ಹೇಳಿ ಬಸ್ಸಿನಿಂದ ಸಾಮಾನುಗಳನ್ನು ಇಳಿಸುತ್ತಿದ್ದ. 'ಏನು ದೇವಣ್ಣ, ನೀ ಬರೀ ಮದುವಿ ಗಿದುವಿ ಅಂತ ಅಡ್ಡಾಡ್ತಿ. ವೈನಿ ಸಾಮಾನು ತರಿಸಿದ್ಲು. ಮೊನ್ನಿ ಉಗಾದಿಯಿಂದ ಒಟ್ಟು ನಾಲ್ಕು ಸಲ ಉಳ್ಳಿಗೇರಿ ಕಿರಾಣಿ ಅಂಗಡಿಯೊಳಗ ತಂದಿದ್ದು. ಉದ್ರಿ ಚೀಟಿ ವೈನಿ ಕಡೆ ಐತಿ. ಬಾಕಿ ಕೊಡಬೇಕಂತ ಹೇಳ್ಯಾರ ನೋಡು.'

ಓಹ್! ಹೆಂಡತಿಗೆ ಸುಭಾಸ ನೆರವಿನ ಹಸ್ತ ನೀಡುತ್ತಿದ್ದಾನೆ! ತಾನೇ ಹೋಗಿ ತರುತ್ತೇನೆಂದು ತನ್ನ ಮುಂದೆ ಹೇಳಿದ್ದಳು. ಈ ಕೊಡುಕೊಳ್ಳುವಿಕೆ ಯಾವಾಗಿನಿಂದ ನಡೆದಿದೆ!

'ಅಲ್ಲೋ ಸುಭಾಸ, ನೀ ಬಾಳ ಹದ್ದು ಮೀರಾಗತ್ತೀ ಅಂದಂಗಾತು. ಮನಿಯೊಳಗ ನಾನಿಲ್ಲದಾಗ ತಂದುಕೊಡ್ತಿ? ಏನ್ ಸಮಾಚಾರ?'

'ನೋಡು ದ್ಯಾವಣ್ಣ, ವೈನಿ ಏನೋ ವಿಶ್ವಾಸ ಇಟ್ಟು ಕೇಳಿದ್ದಕ್ಕ ತಂದುಕೊಟ್ಟೇನಿ. ನಾಯೇನು ಕದ್ದು ಬಂದಿಲ್ಲ, ಕದ್ದು ಹೋಗಿಲ್ಲ. ಯಾವಾಗ್ಲೂ ಹೊಟೇಲ ತುಂಬ ಮಂದಿ ಇರತಾರು. ನಿನ್ನ ಮನಸ್ಸು ಇಷ್ಟು ಕೆಟ್ಟೈತಿ ಅಂತ ಗೊತ್ತಿರಲಿಲ್ಲ' ಮಾತಿಗೆ ಮಾತು ಬೆಳೆದು ದೇವಣ್ಣ ಮತ್ತು ಸುಭಾಸರಿಗೆ ಕೈಗೆ ಕೈಗೆ ಹತ್ತಿತು. ಅಲ್ಲಿದ್ದ ಅನೇಕರು ಬಿಡಿಸಿದರು. ಡ್ರೈವರ್‌ಗೆ ಹೇಳಿ ಬಸ್ಸನ್ನು ಅಲ್ಲಿಂದ ಬೇಗ ಕಳಿಸಿದರು. ಬಸ್ಸು ಹೋದ ಮೇಲೆ ಅನಸವ್ವ ಹಾಡಿಕೊಂಡು ಅಳತೊಡಗಿದಳು.

